

ಹಲವು ಸಮಯಗಳವರೆಗೂ ರಾಜ್ಯಭಾರ ಮಾಡುತ್ತದೆ. ಪುಟ್ಟ ಹುಡುಗಿಯರಿಂದ ಹಿಡಿದು ವಯಸ್ಸಾದ ಮಹಿಳೆಯರವರೆಗೂ ಅದೇ ಉಡುಪು ಪ್ರಚಲಿತದಲ್ಲಿರುತ್ತದೆ. ಬಾಲಿವುಡ್ ನಟಿಯರಾದ ದೀಪಿಕಾ ಪಡುಕೋಣೆ, ಸೋನಂ ಕಪೂರ್, ಮಲ್ಲಿಕಾ ಅರೋರ, ಸೋನಾಕ್ಷಿ ಸಿನ್ಹಾ, ಕರೀನಾ ಮುಂತಾದವರು ಕೇಪ್ ಟಾಪ್ ಧರಿಸಿ ಭರ್ಜರಿ ಪೋಸ್ ಕೊಟ್ಟವರೇ.

ಪ್ಯಾಂಟ್ ಹಾಗೂ ಕೇಪ್ ಟಾಪ್ ಒಂದೇ ಬಣ್ಣದಲ್ಲಿ ವಿನ್ಯಾಸ ಮಾಡಿದ್ದು ಕೂಡ ಸಖತ್ ಲುಕ್ ಕೊಡುತ್ತದೆ. ಬಾಲಿವುಡ್ ನಟಿ ಶಿಲ್ಪಾಶೆಟ್ಟಿ ಧರಿಸಿದ್ದ ಪಲಾಜೊ ಪ್ಯಾಂಟ್ ಮೇಲೆ ಕೇಪ್ ಟಾಪ್ ಸಿನಿಮಾ ಮಾತ್ರವಲ್ಲ ಮಾಡೆಲಿಂಗ್ ಕ್ಷೇತ್ರದಲ್ಲೂ ಹೆಸರು ಮಾಡಿತ್ತು. ಇದೂ ಈಗ ಪಾರ್ಟಿವೇರ್ ಆಗಿ ಜನಪ್ರಿಯವಾಗಿದೆ.

'ಪ್ಯಾಂಟ್‌ಗೆ ಮ್ಯಾಚಿಂಗ್ ಆಗುವ ಹಾಗೂ ಕಾಂಟ್ರಾಸ್ಟ್ ಬಣ್ಣಗಳ ಪ್ಯಾಂಟ್–ಟಾಪ್‌ಗಳು ಯುವತಿಯರ ಮೆಚ್ಚು ಆಗಿವೆ. ಪ್ಯಾಂಟ್ ಹಾಗೂ ಮೇಲಂಗಿಗೆ ಹೊಂದಿಕೊಂಡಂತೆ ಇರುವ ಕೇಪ್‌ನಲ್ಲಿ ಹಲವು ಆಯ್ಕೆಗಳಿವೆ. ಲೆಗ್ಗಿಂಗ್, ಜೀನ್ಸ್ ಪ್ಯಾಂಟ್, ಪಲಾಜೊ, ಲೆಹಂಗಾ, ಜಂಪ್‌ಸೂಟ್, ಲಾಂಗ್ ಮತ್ತು ಶಾರ್ಟ್ ಸ್ಕರ್ಟ್‌ಗಳು... ಹೀಗೆ ಎಲ್ಲ ರೀತಿಯ ಉಡುಪುಗಳಿಗೂ ಸರಿಹೊಂದುವ ಕೇಪ್ ಟಾಪ್‌ಗಳು ಬಂದಿವೆ. ಇವುಗಳಲ್ಲಿ ಟ್ರಾನ್ಸ್‌ಪರಂಟ್, ಲೇಯರ್ಡ್, ಡಾಟೆಡ್, ನೆಟೆಡ್, ಸೀಕ್ವೆನ್ಸ್ ಮಾದರಿಯ ಟಾಪ್‌ಗಳು ಇದೀಗ ಟಾಪ್ ಟ್ರೆಂಡಿಂಗ್‌ನಲ್ಲಿವೆ' ಎಂದು ಹೇಳುತ್ತಾರೆ ಬೆಂಗಳೂರಿನಲ್ಲಿರುವ ಕೋಲ್ಕತ್ತ ಮೂಲದ ಫ್ಯಾಷನ್ ಡಿಸೈನರ್ ರಿಷಿಕಾ ಮುಖರ್ಜಿ.

'ಯಾವುದೇ ಬಣ್ಣದ ಟೈಟ್ ಟಾಪ್ ಮೇಲೆ ಗಾಳಿಯಲ್ಲಿ ಹಾರಾಡುವಂಥ ಟ್ರಾನ್ಸ್‌ಪರಂಟ್ ಟಾಪ್‌ಗಳು ಮಾಡರ್ನ್ ಉಡುಗೆ ಬಯಸುವ ಹೆಂಗಳೆಯರನ್ನು ಬಹುವಾಗಿ ಸೆಳೆಯುತ್ತಿವೆ. ಇದರಲ್ಲಿ ಕುಸುರಿ ಕಲೆಯ, ಡಾಟೆಡ್ ವಿನ್ಯಾಸದ ಟಾಪ್‌ಗಳು ಯಾವುದೇ ಶೈಲಿಯ ಪ್ಯಾಂಟ್‌ಗಳಿಗೂ ಸೂಕ್ತವಾಗಿ ಮ್ಯಾಚ್ ಆಗುತ್ತವೆ' ಎನ್ನುತ್ತಾರೆ ರಿಷಿಕಾ.

ಕೇಪ್ ಟಾಪ್‌ನಲ್ಲಿ ಕುಚ್ಚು ಇರುವಂಥವು ಕೂಡ ಹೊಸದಾಗಿ ಬಂದಿದೆ. ಇದು ಆಧುನಿಕ–ಸಾಂಪ್ರದಾಯಿಕ ಉಡುಗೆಗಳ ಮಿಶ್ರಣದಂತಿದೆ. ಕಾಂಟ್ರಾಸ್ಟ್ ಕಲರ್‌ನಲ್ಲಿ ಡಾಟೆಡ್ ಕೇಪ್ ಟಾಪ್ ಪುಟ್ಟ ಹುಡುಗಿಯರು ಮುದ್ದಾಗಿ ಕಾಣಲು ಸಹಕಾರಿಯಾಗುತ್ತದೆ' ಎಂದೂ ಹೇಳುತ್ತಾರೆ ಈ ವಸ್ತ್ರ ವಿನ್ಯಾಸಕಿ. ■



# ಸ್ಟೈಲಿಷ್ ಪ್ಯಾಂಟ್

ಈಗೀಗ ಪುರುಷರಿಗೂ ಫ್ಯಾಷನ್ ಎಂದರೆ ಕಿವಿ ನೆಟ್ಟಗಾಗುತ್ತದೆ. ಪ್ಯಾಂಟ್, ಶರ್ಟ್, ಕೋಟ್, ಪುಲ್‌ಓವರ್ ಏನೇ ಇದ್ದರೂ ಸ್ಟೈಲಿಷ್ ಆಗಿರಬೇಕು ಎಂಬುದೇ ಅವರ ಬಯಕೆ. ಮೊದಲೆಲ್ಲ ಮಾಡೆಲಿಂಗ್ ಯುವಕರಷ್ಟೇ ಉಡುಪಿನ ಬಗ್ಗೆ ಅತೀವ ಕಾಳಜಿ ವಹಿಸುತ್ತಿದ್ದರು. ಆದರೆ ಈಗ ಕಾಲೇಜು ಹುಡುಗರು, ವೃತ್ತಿಯಲ್ಲಿರುವ ಯುವಕರು ಫ್ಯಾಷನ್ ಬಗ್ಗೆ ವಿಪರೀತ ತಲೆಕೆಡಿಸಿಕೊಳ್ಳಲಾರಂಭಿಸಿದ್ದಾರೆ.

ಮಾಡೆಲಿಂಗ್ ಕ್ಷೇತ್ರದ ಯುವಕರು ಫ್ಯಾಷನಬಲ್ ಉಡುಪುಗಳನ್ನು ತೊಟ್ಟು ರ್‍ಯಾಂಪ್ ಮೇಲೆ ಕ್ಯಾಟ್‌ವಾಕ್ ಮಾಡುವುದನ್ನು ಕಂಡ ಹುಡುಗರು ನಾವೂ ಹೀಗೇ ಕಾಣಬೇಕೆಂದು ಹೊಸ ವಿನ್ಯಾಸದ ಉಡುಪುಗಳತ್ತ ದೃಷ್ಟಿ ನೆಡುತ್ತಿದ್ದಾರೆ. ವೈವಿಧ್ಯಮಯ ಜಾಕೆಟ್‌ಗಳನ್ನು, ಪ್ಯಾಂಟ್, ಪೈಜಾಮಗಳನ್ನು ತೊಟ್ಟು ಸಂಭ್ರಮಿಸುತ್ತಿದ್ದಾರೆ.

ಪ್ಯಾಂಟ್‌ಗಳ ಮಟ್ಟಿಗೆ ಹೇಳುವುದಾದರೆ ಆ್ಯಂಕಲ್ ಲೆಂತ್ ಪ್ಯಾಂಟ್ ಈಗ ಹೆಚ್ಚು ಜನಪ್ರಿಯ. ಈಗ ಪ್ಯಾಂಟ್‌ನಲ್ಲಿ ಪುರುಷರಿಗೆ ಹಲವು ಆಯ್ಕೆಗಳಿವೆ. ಆ್ಯಂಕಲ್ ಲೆಂತ್ ಪ್ಯಾಂಟ್ ಟ್ರೆಂಡ್ ಕೂಡ ಆಗಿದೆ.

ಆ್ಯಂಕಲ್ ಲೆಂತ್ ಪ್ಯಾಂಟ್ ಮೇಲ್ನೋಟಕ್ಕೆ ಪೆನ್ಸಿಲ್ ಕಟ್ ಪ್ಯಾಂಟ್‌ನಂತೆ ಇದೆ. ಇದು ಪಾದದ ಕೀಲಿನ ಭಾಗಕ್ಕಿಂತ ಸ್ವಲ್ಪ ಮೇಲೆ ಇರುತ್ತವೆ. ಬರ್ಮುಡಾಕ್ಕಿಂತಲೂ ಉದ್ದದ ಮತ್ತು ಎಲ್ಲ ಪುರುಷರು ಧರಿಸುವ ಫಾರ್ಮಲ್ ಪ್ಯಾಂಟ್ ಗಿಂತಲೂ ಸ್ವಲ್ಪ ಗಿಡ್ಡದ ಈ ಪ್ಯಾಂಟ್‌ಗಳು ಇತ್ತೀಚೆಗೆ ಪುರುಷರ ಫ್ಯಾಷನ್ ಜಗತ್ತಿನಲ್ಲಿ ಹೊಸ ಭರವಸೆ ಮೂಡಿಸಿದೆ.

ಆ್ಯಂಕಲ್ ಲೆನ್ಸ್ ಪ್ಯಾಂಟ್ ಜೀನ್ಸ್, ಡೆನಿಮ್‌ಗಳಲ್ಲಿ ಈ ಮೊದಲೂ ಸಿಗುತ್ತಿತ್ತು. ಪುರುಷರು ಇಷ್ಟಪಟ್ಟು ಧರಿಸುತ್ತಿದ್ದರು. ಯುವಕರ ಫ್ಯಾಷನ್ ಬೇಡಿಕೆ ಹೆಚ್ಚಾದಂತೆ ಫ್ಯಾಷನ್ ಉಡುಪು ವಿನ್ಯಾಸಕಾರರು ಫಾರ್ಮಲ್ ಪ್ಯಾಂಟ್‌ನಲ್ಲೂ ಇದೇ ವಿನ್ಯಾಸ ತರಲಾರಂಭಿಸಿದರು. ಈಗ ಕಾಟನ್, ಜೀನ್ಸ್, ಡೆನಿಮ್, ಲಿನನ್ ಬಟ್ಟೆಗಳಲ್ಲೂ ಆ್ಯಂಕಲ್ ಲೆಂತ್ ಪ್ಯಾಂಟ್‌ಗಳು ಲಭ್ಯ. ಬಣ್ಣಗಳಲ್ಲೂ ಸಾಕಷ್ಟು ಆಯ್ಕೆ ಇದೆ. ಹೀಗಾಗಿ ಯಾವ ಗಾತ್ರ, ಬಣ್ಣದವರಿಗೂ ಈ ಪ್ಯಾಂಟ್ ಹೊಂದಿಕೆ ಆಗುತ್ತದೆ. ಜತೆಗೆ ಎಲ್ಲ ರೀತಿಯ ಶರ್ಟ್, ಟೀ ಶರ್ಟ್ ಜತೆಗೂ ಈ ಪ್ಯಾಂಟ್ ಅನ್ನು ಧರಿಸಬಹುದು ಎನ್ನುತ್ತಾರೆ ಫ್ಯಾಷನ್ ತಜ್ಞರು. ■